**ಸಿ.ಮಿಸ ನಂ. 2/2022**

**ಪಿ.ಡಬ್ಲೂಃ 1**

**ಇಂದು ದಿನಾಂಕ 17.09.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋಧಿಸಲಾಯಿತು.**

**ಪಾಟೀಸವಾಲು– ಎದುರುದಾರರ ಪರ ವಕೀಲರಿಂದ.**

ನಾನು ಪ್ರಾಥಮಿಕ ಶಾಲೆಯ ಶಿಕ್ಷಕನಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ನಾನು ಕಳೆದ 13 ವರ್ಷಗಳಿಂದ ಶಿರಶ್ಯಾಡ ಗ್ರಾಮದ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕನಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ಅಪಘಾತದಲ್ಲಿ ರಾಜೇಂದ್ರರವರು ಮೃತಪಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಅಪಘಾತದಲ್ಲಿ ಭಾಗಿಯಾದ ವಾಹನದ ಮಾಲೀಕ ನಾನು ಇದ್ದೆ ಅಂದರೆ ಸರಿ. ಆ ವಿಚಾರವಾಗಿ ನನ್ನ ಮೇಲೆ ಕ್ರಿಮಿನಲ ಪ್ರಕರಣ ದಾಖಲಾಗಿತ್ತು ಅದರಲ್ಲಿ ನಾನು ಹಾಜರಾಗಿದ್ದೆ ಅಂದರೆ ಸರಿ. ಎದುರುದಾರರು ನನ್ನ ವಿರುದ್ದ ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದರು ಅಂದರೆ ಸರಿ. ಆ ಅರ್ಜಿಯಲ್ಲಿ ನನಗೆ ನೋಟಿಸು ಕಳುಹಿಸಿದ್ದರು ಅದು ನನಗೆ ಮುಟ್ಟಿತು ಅಂದರೆ ಸರಿ. ಆ ನೋಟಿಸು ಮುಟ್ಟಿದ ನಂತರ ನಾನು ನಮ್ಮ ಊರ ಹಿರಿಯರ ಮೂಲಕ ಅರ್ಜಿದಾರರ ಮನೆಗೆ ಹೋಗಿ ರಾಜಿ ಮಾತುಕತೆ ಮಾಡಿದ್ದೆವು. ಆ ರೀತಿ ರಾಜಿಯಾಗದ ಕಾರಣ ಎದುರುದಾರರು ಆ ಅರ್ಜಿಯನ್ನು ಮುಂದುವರಿಸಿದರು ಅಂದರೆ ಸರಿ. ಆ ಅರ್ಜಿ ಅವರ ಪರವಾಗಿ ತೀರ್ಮಾನ ಆಯಿತು ಅಂದರೆ ನನಗೆ ಗೊತ್ತಿಲ್ಲ.

ಆ ಅದೇಶದಂತೆ ಎದುರುದಾರರು ದರಖಾಸ್ತ ಅರ್ಜಿ ಸಲ್ಲಿಸಿದರು ಅಂದರೆ ಸರಿ. ಆ ದರಖಾಸ್ತ ಅರರ್ಜಿಯಲ್ಲಿ ನನಗೆ ನೋಟಿಸು ಜಾರಿ ಆಗಿತ್ತು ಅಂದರೆ ಸರಿಯಲ್ಲ. ಆದರೆ ಸಾಕ್ಷಿ ಮುಂದುವರಿದು ನಾನು ನ್ಯಾಯಾಲಯಕ್ಕೆ ಮುದ್ದತ್ತಿಗೆ ಬಂದಾಗ ಗೊತ್ತಾಗಿತ್ತು ಎಂದು ನುಡಿಯುತ್ತಾರೆ. ವಿಳಂಬವಾಗಿ ಅರ್ಜಿ ಸಲ್ಲಿಸಿದಕ್ಕೆ ಯಾವುದೇ ಸಕಾರಣ ಇಲ್ಲ ಅಂದರೆ ಸರಿಯಲ್ಲ. ಮೂಲ ಪ್ರಕರಣ ನಡೆದು ತೀರ್ಮಾನವಾದ ಬಗ್ಗೆ ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನೋಟಿಸಿನ ಮೇಲೆ ನನ್ನ ಖೊಟ್ಟಿ ಸಹಿ ಮಾಡಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಕೋವಿಡ ಕಾಯಿಲೆ ಕಾರಣಕ್ಕಾಗಿ ಅರ್ಜಿ ಸಲ್ಲಿಸಲು ವಿಳಂಬವಾಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ದರಖಾಸ ಅರ್ಜಿಯಲ್ಲಿ ನೋಟಿಸು ಮುಟ್ಟಿದ ನಂತರ ಗೊತ್ತಾಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಸಂಗತಿಗಳನ್ನು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ

ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ.ಎಂ.ಎಫ್.ಸಿ.
ಇಂಡಿ.